ತಾರೀಖು 1ನೇ ಮಾರ್ಚ್ 1907.

ನಂ. 7594—ಸ್ಯಾನಿಟರಿ 15-06-8, ಸಮಸ್ತ ಜನರ ತಿಳಿವಳಿಕೆಗೆ ಬಗ್ಗೆ ಇದರಿಂದ ಪ್ರಸಿದ್ಧ ಪಡಿಸುವುದೇನಂದರೆ ಪ್ಲೇಗು ತಗುಲಿದ ಪ್ರದೇಶಗಳೆಂದು ಜಾಹಿರಾಗಿ ಪ್ರಕಟಿಸಲ್ಪಟ್ಟಿರುವ ಮೈಸೂರು ಡಿಸ್ಟ್ರಿಕ್ಟಿನ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ	ತಾಲ್ಲೂಕು
ಹೊಟ್ಟಗಾಲ	ಟಿ. ನರಸೀಪುರ.
ದೊಡ್ಡಪುರ	ಡಿಟೋ
ದೊಡ್ಡಬಾಗಿಲು	ಡಿಟೋ
ರಾಮನಕೊಪ್ಪಲು	ಡಿಟೋ
ಹೊಸಪಟ್ಟಿಗಾ	ಡಿಟೋ
ಇಂಡವಾಲು	ಡಿಟೋ
ದೊಡ್ಡಬ್ಯಾಡರಹಳ್ಳಿ	ಶ್ರೀರಂಗಪಟ್ಟಣ
ಹುಲ್ಲಹಳ್ಳಿ	ಚಾಮರಾಜನಗರ
ಗೌಡಹಳ್ಳಿ	ಗುಂಡ್ಲುಪೇಟೆ
ಹುಲ್ಲವಾದನಹಳ್ಳಿ	ಡಿಟೋ
ಇರಸವಾಡಿ	ಡಿಟೋ
ಚಿಕ್ಕಟ್ಟಿ	ಡಿಟೋ
ಹೆಗ್ಗಾಲ	ಡಿಟೋ
ಹರದಹಳ್ಳಿ	ಡಿಟೋ
ಕಳ್ಳಿಕೊಪ್ಪಲು	ಡಿಟೋ
ಅಂದಾಯಿನಗಾಡನ ಕೊಪ್ಪಲು	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು
ಲೂಲಂದೇವನಹಳ್ಳಿ	ಎಡತೊರೆ.
ಅಂಬಲರೆ	ಹುಣಸೂರು.
ಮುಬ್ಬಲ್ಲಿ	ನಂಜನಗೂಡು.
ಹನಿಯಂಬಲ್ಲಿ	ಡಿಟೋ
ಹೊಳಿಪುರ	ಡಿಟೋ

ತಾರೀಖು 22ನೇ ಫೆಬ್ರುವರಿ 1907.

ನಂ. ಜಿ. 5276—ಜಿ. ಎಂ. 255-06—2, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಈ ಇಸ್ತಿಹಾರ್‌ನಾವೆಯಿಂದ ಪ್ರಸಿದ್ಧ ಪಡಿಸುವುದೇನಂದರೆ :—

ಇಂಡಿಯಾ ದೇಶದಿಂದ (ಉತ್ತರ ಅಮೇರಿಕಾದ) ಕೆನಡಾ ದೇಶಕ್ಕೆ ಜನರು ವಲಸೆ ಹೋಗುವುದನ್ನು ಅಡ್ಡಿ ಮಾಡಬೇಕೆಂದೂ, ಹಾಗೆ ವಲಸೆ ಹೋಗಬೇಕೆಂದಿರುವವರಿಗೆ ಆ ದೇಶದಲ್ಲಿ ಯಾವ ಕಲಸವನ್ನು ಸಂಪಾದಿಸುವುದು ಸಾಧ್ಯವಿಲ್ಲವೆಂದು ಅವರಿಗೆ ಎಚ್ಚರಿಸಬೇಕೆಂದೂ, ಅವರು ಗತಿಯಿಲ್ಲದವರಾಗಿರುವ ಸಂದರ್ಭದಲ್ಲಿ ಕೆನಡಾ ಪ್ರಾಂತದ ಕಾನೂನಿನ ಪ್ರಕಾರ ಅವರು ಪಾಡಿಪಾರು ಮಾಡಲ್ಪಡುವುದಕ್ಕೆ ಗುರಿಯಾಗುತ್ತಾರೆಂದು ತಿಳಿಸಬೇಕೆಂದೂ ಕೆನಡಾ ಸರ್ಕಾರದವರು ಕೋರುತ್ತಾರೆ.

ತಾರೀಖು 1ನೇ ಮಾರ್ಚ್ 1907.

ನಂ. ಜಿ. 2655—ಪೋಲೀಸ್ 142-06—4, ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್‌ಗಳ 177ನೆಯ ಪ್ರಕರಣದ ನ್ಯೇರಕ್ಕೆ, ಪೊಲೀಸು ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ|| ಮಿರ್ಜಾ ಮಹಮ್ಮದ್ ಇಸ್ಮೈಲ್ ಬಿ. ಎ., ಯವರಿಗೆ 1907ನೆಯ ಇಸವಿಯ ಫೆಬ್ರವರಿ 18ನೆ ತಾರೀಖಿನಿಂದ ಅಥವಾ ಆ ತಾರೀಖಿನ ತರುವಾಯ ಅವರು ರಜಾವನ್ನು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಬಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

ತಾರೀಖು 1ನೆ ಮಾರ್ಚ್ 1907.

ನಂ. ಜೆ. 5389—ಜಿ. ಎಂ. 19-06—10, ಸ್ಯ. 1894ನೆ ಇಸವಿಯ 11ನೆ ನಂಬರ್ಡ (ನವೀನ ಕಲ್ಪನೆಗಳು ಮತ್ತು ನಕ್ಷೆಗಳು) ರೆಗ್ಯುಲೇಷನಿನ 8, 9, 10 ಮತ್ತು 11ನೆ ಪ್ರಕರಣಗಳನ್ನನುಸರಿಸಿ ಬಂದು ನವೀನ ಕಲ್ಪನೆಯ ಇಪ್ಪರಡ್ಡಿ ಕಂಡ್ಲಗಿವಿ ರಣೆಯು ತಲಿಸಿರುತ್ತದೆ. ಮತ್ತು ಇಷ್ಟವಿರುವವರು ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯವರಿಗೆ ಬರೆದುಕೊಂಡು ಬಂದು ರೂಪಾಯಿ ರುಸುಂ ಕೊಟ್ಟು ಅವರ ಕಚೇರಿಯಲ್ಲಿ ಆ ವಿವರಣೆಯನ್ನು ಪರೀಕ್ಷೆ ಮಾಡಿ ನೋಡಲು ಅಡ್ಡಿ ಇರುವುದಿಲ್ಲ.

ಸ್ಟಾಂಗ್‌ಹೋಡಿನ್ಸ್ ಲ್ಯಾಂಕಾಸ್ಟರ್ ಕಾಂಟ್ಯಯ, ಲ್ಯಾಂಕಾಸ್ಟರ್ ಪಟ್ಟಣದಲ್ಲಿರುವ ಗಣಿಯ ಇಂಜನೀರ್ ಮಿ|| ಚಾರ್ಲ್ಸ್ ಬ್ಲೇಡ್ಸ್ ಕವರ್ಡೇಲ್ ಸ್ಕೋರಿ ಯವರಿಂದ ಮಾಡಲ್ಪಟ್ಟದ್ದು.

ಪುಡಿ ಮಾಡುವ್ದ, ಹೊಳೆಯುವ, ಶೋಧಿಸುವ ಯಂತ್ರಗಳಿಗೆ ಸಂಬಂಧಪಟ್ಟ ಅಭಿವೃದ್ಧಿಗಳು.